Sri R. M. PATIL.—The statement of propery lost—a copy of which I am placing on the Table of the House—which reveals that foodgrains were looted only from a few godowns. Articles other than foodgrains were looted. This only goes to show that the motive for looting is something else.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾವು ಬೇಕಾದರೆ ಪ್ರೊಸೀಡಿಂಗ್ಸ್ ನೋಡಿ, ತಮ್ಮ ಕಾಲದಲ್ಲಿ ನಾನು ಮಾತನಾಡದೇ ಇರುವುದೇ ಆಗಿದೆ.

Mr. SPEAKER.—I make a final request to the Hon'ble Member. He must not disturb too often because it distracts my attention. He goes on making comments also. Let him not repeat it. It is difficult for me to concentrate if such things happen.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪೋಲೀಸರ ಮನೆಯಲ್ಲ...

Mr. SPEAKER.—If the Member wants I will give him a copy of all the proceedings. He is the only member who has been allowed to put the largest number of supplementaries.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಉತ್ತರವನ್ನು ಸ್ಪೆಸಿಫಿಕ್ಕಾಗಿ ಅವರು ಹೇಳಬೇಕು.

Mr. SPEAKER.—I will ask him to analyse himself.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಲೂಟಿಯಾದ ಮೂರುನಾಲ್ಕು ದಿವಸಗಳಾದ ಮೇಲೆ ಪೋಲೀಸರ ಮನೆಯಲ್ಲಿ ಎಷ್ಟು ಮೂಟೆ ಗೋಧಿ ಸಿಕ್ಕಿತು. ಪೋಲೀಸರ ಮುಂದೆ ಮೆರವಣಿಗೆ ಹೋದಾಗ ನಮ್ಮ ಹತ್ತಿರ ಏಕೆ ಬರುತ್ತೀರಿ; ಅಂಗಡಿ ಹತ್ತಿರ ಹೋಗಿ ಎಂಬುದಾಗಿ ಹೇಳಿದ್ದು ನರ್ಕಾರದ ಗಮನಕ್ಕೆ ಬಂದಿದೆಯೇ?

Sri R. M. PATIL.—I have already submitted that such an allegation is far from truth. May I submit that 19 cases are pending before a court and the matter is *subjudice*. It is not advisable that I should furnish any more details.

Sri R. S. HEGDE.—Will the Government contemplate levy of community tax on the village with a view to arrest such incidents.

Sri R. M. PATIL.—Unless there is an occasion, this is not necessary.

Obstacles for the free flow of water in Bijapur City.

*Q.—158. Sri J. L. KABADI (Baradol).—

Will the Government be pleased to state :—

(*a*) whether it is not a fact that the sudden and heavy flow of water in the Bijapur City was mainly due to the unauthorised obstacles placed (bunds on the sites) across the free water flow along the fort-wall on the western side of the City ;

(*b*) whether it is a fact that the persons cultivating the lands along the fort-wall (canal) of western side of the City have put bunds unauthorisedly ;

(*c*) the steps taken by the Municipality and the Government or giving free passage to heavy flow of water?

A.—Sri K. PUTTASWAMY (Minister for Municipal Administration).—

(a) No.

(b) No.

(c) The heavy flow of the water in the City was mainly due to the—(1) unprecedented and torrential rainfall from 25th September 1964 to 5th October 1964.

(2) The silting up of the western side of the trench surrounding the fort-wall, and

(3) The bunds not unauthorisedly constructed by some owners of Agricultural lands across the passage of water flowing along the fort wall for protection of their lands.

The President of the Municipality has therefore arranged to excavate the trench and issued notices to the owners of lands for demolition of the bunds for providing a free passage to the flow of water.

ಶ್ರೀ ಜೆ. ಎಲ್. ಕವಾಡಿ.—ಸ್ವಾಮಿ, ನನ್ನ (a) ಪ್ರಶ್ನೆಗೆ ಉತ್ತರವಾಗಿ ಬಿಜಾಪುರ ನಗರದ ಪಶ್ಚಿಮ ಭಾಗದ ಕೋಟೆಯ ಉದ್ದಕ್ಕೂ ನರಾಗವಾಗಿ ಹರಿಯುತ್ತಿರುವ ನೀರಿಗೆ ಅಡ್ಡವಾಗಿ ಅನಧಿಕೃತ ತಡೆಗಟ್ಟುಗಳನ್ನು ಹಾಕಿದ್ದರ ಪ್ರಯುಕ್ತ ಆಕಸ್ಮಿಕ ಹಾಗೂ ಭಾರಿ ಪ್ರಮಾಣದಲ್ಲಿ ನಗರದೊಳಕ್ಕೆ ನೀರು ನುಗ್ಗಿದ್ದು ನಿಜವಲ್ಲ ಎಂದು ಹೇಳಿದ್ದೀರಿ, ಆಮೇಲೆ (ಸಿ) ಪ್ರಶ್ನೆಗೆ ಉತ್ತರವಾಗಿ ಕೆಲವು ಭೂವಾಲೀಕರು ಹರಿಯುತ್ತಿರುವ ನೀರಿಗೆ ಅಡ್ಡವಾಗಿ ತಡೆಗಟ್ಟುಗಳನ್ನು ನಿರ್ಮಿಸಿದ್ದು ನಿಜ ಎಂದು ಹೇಳಿದ್ದೀರಿ; ಹಾಗಾದರೆ ಅಲ್ಲಿ ಭೂವಾಲೀಕರು ತಡೆಗಟ್ಟುಗಳನ್ನು ಹಾಕಿದ್ದರಿಂದ ನೀರು ಊರಿನ ಒಳಗಡೆ ನುಗ್ಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅಲ್ಲಿ ಊರಿನೊಳಕ್ಕೆ ನೀರು ನುಗ್ಗಲು ಕೆಲವು ಭೂಮಾಲೀಕರು ತಡೆಗಟ್ಟುಗಳನ್ನು ಹಾಕಿದ್ದೂ ಒಂದು ಕಾರಣ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈಗಾಗಲೇ (a) ಪ್ರಶ್ನೆಗೆ ಉತ್ತರ ಕೊಟ್ಟಿರುವ ಹಾಗೆ ಅನಧಿಕೃತವಾಗಿ ತಡೆಗಟ್ಟುಗಳನ್ನು ಹಾಕಿದ್ದು ನಿಜವಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಬಿಜಾಪುರ ಪ್ರಸಿದ್ಧವಾದ ಒಂದು ಊರು. ಕೋಟೆ ನೀರು ನಗರದೊಳಗೆ ನುಗ್ಗುತ್ತಿರುವುದರಿಂದ ಅತ್ಯಂತ ಮಹತ್ವವಾಗಿರುವ ಐತಿಹಾಸಿಕ ಅವಶೇಷಗಳು ಮತ್ತು ಮನೆಗಳು ಬೀಳುತ್ತಿವೆ. ಈ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ಅಲ್ಲಿನ ಪೌರಸಭೆಯವರು ಆ ಬಗ್ಗೆ ಏನುಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ಆಲೋಚನೆ ಮಾಡಿ ಅದಕ್ಕೆ ಬೇಕಾದ ಅಂದಾಜನ್ನು ಕಳುಹಿಸಿಕೊಟ್ಟರೆ ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಪುರಸಭೆಯವರು ಆ ಕೆಲಸವನ್ನು ಮಾಡುವುದಕ್ಕೆ ಹೆಚ್ಚು ಖರ್ಚು ಬರುತ್ತದೆ, ಆದ್ದರಿಂದ ಸರ್ಕಾರದವರೇ ಆ ಕೆಲಸವನ್ನು ಮಾಡುವುದು ಉಚಿತ ಎಂದು ಅವರು ಈಗಾಗಲೇ ಸರ್ಕಾರಕ್ಕೆ ತಿಳಿಸಿಲ್ಲವೇ ?

Sri S. R. KANTHI (Minister for Education)—Sir, may I reply to this supplementary ? This also concerns the Archæological Department. I have visited Bijapur in connection with this and I saw that large quantity of water collected from the rains was flowing in the city and damaging the monuments. I brought this to the notice of the Hon'ble Minister for Education at the Centre and he sent the Director General of Archæological Department to go round and see. After the visit of the Director it was decided that a plan and estimate should be made and sent to the Central Government. It is being forwarded. I now hear—not from official source but through one of the M Ps—that the Government of India as a temporary measure has sanctioned about Rs. 50,000.

ಶ್ರೀಮತಿ ಸುಶೀಲಾಬಾಯಿ ಪೀರಾಪುರ್:—ಈಗ ಬಿಜಾಪುರದ ನಗರದೊಳಕ್ಕೆ ನೀರು ನುಗ್ಗುತ್ತಿರುವುದರಿಂದ ಅದು ಮನೆಗಳ ಒಳಕ್ಕೂ ಹರಿದು ಬರುತ್ತಿದೆ. ಇದರಿಂದ ಅಲ್ಲಿನ ಜನಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಇದನ್ನು ಸರ್ಕಾರದವರು ವಿಚಾರಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಶ್ರೀಮತಿ ಸುಶೀಲಾಬಾಯಿ ಅವರ ಭೂಮಿ ಅಲ್ಲದೆ ಅದಕ್ಕೋಸ್ಕರ ಅವರು ಈ ಬಗ್ಗೆ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ನಾವು ಅದನ್ನು ವಿಚಾರಿಸುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಕೋಚೆ ಗೋಡೆ ಬಳಿ ಇರುವ ಭೂಮಾಲೀಕರು ವಿನಿದ್ದಾರೆ ಅವರು 50 ಪಡಿ ಜಮೀನನ್ನು ಅತಿಕ್ರಮಣ ಮಾಡಿದ್ದರಿಂದಲೂ ಮತ್ತು ಅವರು ಹೆಚ್ಚಿನ ನೀರನ್ನು ಅವರ ದಾರಿಯಲ್ಲಿ ತಡೆಗಟ್ಟಿದ್ದರಿಂದಲೂ ಅಲ್ಲ ನೀರು ಸರಾಗವಾಗಿ ಹರಿದು ಹೋಗಲು ಬೇರೆ ಮಾರ್ಗವಿಲ್ಲದುದರಿಂದ ಹೆಚ್ಚು ನೀರು ಊರಿನೊಳಕ್ಕೆ ನುಗ್ಗಿ ಅಲ್ಲ ಲುಕ್ಸಾನಾಗಿದೆ. ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರಿಗೆ ಗೊತ್ತಿದೆ. ಅಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕಾದರೆ ಸ್ವಲ್ಪ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಆ ಕೆಲಸವನ್ನು ಮಾಡಲು ನಾವು ಕೇಂದ್ರ ಸರ್ಕಾರದವರಿಂದ ಸಹಾಯವನ್ನು ನಿರೀಕ್ಷಣೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಬಿಜಾಪುರ ನಗರದೊಳಗೆ ನೀರು ನುಗ್ಗದಂತೆ ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆಮಾಡಲು ಒಂದು ಯೋಜನೆಯನ್ನು ತಯಾರು ಮಾಡಿ ಅದಕ್ಕೆ ಎಸ್ಟಿಮೇಟ್ ತಯಾರುಮಾಡಿ ಕಳುಹಿಸಿದರೆ ಅದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಯೇ?

Sri S. R. KANTHI.—When I was there the Municipal President gave a representation saying that the Government should come to the help. I have forwarded it to the Central Government. I hope something will be done before the rains start.

Sri C. J. MUCKANNAPPA.—Sir, is it that the Hon'ble Minister for Municipal Administration incompetent to answer these questions?

Sri S. R. KANTHI.—The Hon'ble Member is under wrong impression. I have made it clear that this concerns the Archæological Department. It is not so much a question of municipal administration. It is a question of protecting the monuments which is the main concern of the Archæological Department.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಆ ರೀತಿ ನಗರದಲ್ಲಿ ನೀರು ನುಗ್ಗುವುದಕ್ಕೆ ಕೆಲವು ಭೂಮಾಲೀಕರು ಕೋಚೆ ಗೋಡೆಯುದ್ದಕ್ಕೂ ಹರಿಯುತ್ತಿರುವ ನೀರಿಗೆ ಅಡ್ಡಲಾಗಿ ತಡೆಗಟ್ಟುಗಳನ್ನೂ ಹಾಕಿದ್ದೂ ಒಂದು ಕಾರಣ ಎಂದು (c) ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೀರಿ, ಆದ್ದರಿಂದ ಆ ರೀತಿ ಅವರು ಅನಧಿಕೃತ ತಡೆಗಟ್ಟುಗಳನ್ನು ಹಾಕಿರುವುದರಿಂದ ಆ ತರಹ ನೀರು ನುಗ್ಗುವುದಕ್ಕೆ ಅವಕಾಶವಾಗುತ್ತಿದೆಯಲ್ಲವೇ?

Sri K. PUTTASWAMY.—In reply to (a) it is stated that the bunds cannot be considerded as unauthorised because they are existing for a long time. But those bunds that have been raised across the ditch are responsible for this. So steps are taken to get them demolished.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಇಂಥ ಸಿಚ್ಯುಯೇಷನ್ ಯಾವಾಗಲಾದರೂ ಒದಗಿತ್ತೇ?

ಶ್ರೀ ಕೆ. ಪುಟ್ಟಸ್ವಾಮಿ.—ಬಿಜಾಪುರದಲ್ಲಿ ಸಾಮಾನ್ಯವಾಗಿ 17 ಇಂಚು ಮಳೆ ಆಗುತ್ತಿತ್ತು. ಆದರೆ ಈ ವರ್ಷ ಅಲ್ಲ 67 ಇಂಚು ಮಳೆ ಬಿದ್ದಿತು. ಆದ್ದರಿಂದ ಭಾರಿ ಪ್ರಮಾಣದ ನೀರು ಬರುವುದಕ್ಕೆ ಅವಕಾಶವಾಯಿತು. ಇಲ್ಲದೇ ಇದ್ದರೆ ಅಂಥಾ ಪರಿಸ್ಥಿತಿ ಒದಗುತ್ತಾ ಇರಲಿಲ್ಲ.